**ಒ.ಎಸ್.ನಂ. 26/2014**
**DW-7**

**(ಇಂದು ದಿನಾಂಕಃ 11-06-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರಿದ ಪಾಟೀ ಸವಾಲುಃ ಮಾನ್ಯ JPA ವಕೀಲರಿಂದಃ**

ರಾಮತೀರ್ಥದಲ್ಲಿರುವ ಸ.ನಂಬರ 58 ರಲ್ಲಿ ಬೆಳೆದ ಉತ್ಪನ್ನಗಳನ್ನು ಬಸವರಾಜ ಮಾತ್ರ ಸುಮಾರು 20 ವರ್ಷಗಳಿಂದ ಪಡೆಯುತ್ತಿದ್ದಾನೆ ಎಂದರೆ ಸರಿಯಲ್ಲ, ಎಲ್ಲರೂ ಪಡೆಯುತ್ತಿದ್ದೇವೆ. ರಾಮತೀರ್ಥದಲ್ಲಿರುವ ಸ.ನಂಬರ 10 ರಲ್ಲಿ ಬೆಳೆದ ಉತ್ಪನ್ನಗಳನ್ನು ಶಾಂತಪ್ಪ ಮಾತ್ರ ಸುಮಾರು 20 ವರ್ಷಗಳಿಂದ ಪಡೆಯುತ್ತಿದ್ದಾನೆ ಎಂದರೆ ಆತನ ಉಪ ಜೀವನಕ್ಕೆ ಪಡೆಯುತ್ತಿದ್ದಾನೆ. ಹಲಚೇರಾದಲ್ಲಿರುವ ಸ.ನಂಬರ 186 ರಲ್ಲಿ ಬೆಳೆದ ಉತ್ಪನ್ನಗಳನ್ನು ನಾನು ಮಾತ್ರ ಸುಮಾರು 20 ವರ್ಷಗಳಿಂದ ಪಡೆಯುತ್ತಿದ್ದಾನೆ ಎಂದರೆ ಸರಿಯಲ್ಲ, ಅದು ಬೀಳು ಬಿದ್ದಿರುತ್ತದೆ. ರಾಮತೀರ್ಥದಲ್ಲಿರುವ ಸ.ನಂಬರ 9 ರಲ್ಲಿ ಬೆಳೆದ ಉತ್ಪನ್ನಗಳನ್ನು ನಾನು ಮಾತ್ರ ಸುಮಾರು 20 ವರ್ಷಗಳಿಂದ ಪಡೆಯುತ್ತಿದ್ದಾನೆ ಎಂದರೆ ಸರಿಯಲ್ಲ.

ರಾಮತೀರ್ಥದಲ್ಲಿರುವ ಸ.ನಂಬರ 9 ರಲ್ಲಿ ಬೆಳೆದ ಉತ್ಪನ್ನಗಳನ್ನು ಶಾಂತಪ್ಪ ಮತ್ತು ಬಸವರಾಜ ಪಡೆಯುತ್ತಾರೆ. ಹಲಚೇರಾದಲ್ಲಿರುವ ಸ.ನಂಬರ 98 ರಲ್ಲಿ 3 ತುಕಡಿಗಳು ಇವೆ ಎಂದರೆ ಸರಿ, ನಾಗೇಂದ್ರಪ್ಪ, ಸುಭಾಶ್ಚಂದ್ರ, ಚಂದ್ರಕಾಂತ ಕ್ರಮವಾಗಿ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ನಾವು ಉಳುಮೆ ಮಾಡುತ್ತೇವೆ. ಅದರಲ್ಲಿ ಬೆಳೆದ ಉತ್ಪನ್ನಗಳನ್ನು ಆ ಮೂರು ಜನ ಮಾತ್ರ ಪಡೆಯುತ್ತಾರೆ ಎಂದರೆ ಸರಿಯಲ್ಲ, ನಾವು ಪಡೆಯುತ್ತೇವೆ.

ಸ.ನಂಬರ 94/ಎ ಕ್ಷೇತ್ರ 8 ಎಕರೆ ಜಮೀನು ರುಕ್ಮಿಣಿಬಾಯಿಗೆ ಅವರ ತಂದೆ ತಾಯಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಒಟ್ಟು ಜಂಟಿ ಕುಟುಂಬದ ಆದಾಯದಿಂದ ಕ್ರಯ ಪಡೆದ ಜಮೀನು ಇರುತ್ತದೆ. ಆ ಬಗ್ಗೆ ಕ್ರಯ ಪತ್ರವನ್ನು ಸಲ್ಲಿಸಿರುವುದಿಲ್ಲ. ಅದನ್ನು ಜಂಟಿ ಕುಟುಂಬದ ಆದಾಯದಿಂದ ಕ್ರಯ ಪಡೆದಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಅದರ ಎಲ್ಲಾ ಉತ್ಪನ್ನವನ್ನು ರುಕ್ಮಿಣಿಬಾಯಿ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ 5-6 ವರ್ಷಗಳಿಂದ ಅದರ ಉತ್ಪನ್ನವನ್ನು ರುಕ್ಮಿಣಿಬಾಯಿ ಮಾತ್ರ ಪಡೆಯುತ್ತಿದ್ದಾರೆ. ರುಕ್ಮಿಣಿಬಾಯಿ ಆಕೆಯ ಪಾಲಿಗೆ ಬಂದ ದಿನದಿಂದಲೂ ಅವಳೇ ಉತ್ಪನ್ನವನ್ನು ಪಡೆಯುತ್ತಿದ್ದಾಳೆ ಎಂದರೆ ಸರಿಯಲ್ಲ.

ನನ್ನ ಕುಟುಂಬದಲ್ಲಿ ನಾನು ನನ್ನ ಹೆಂಡತಿ, ಒಬ್ಬ ಗಂಡು ಮಗ, 5 ಜನ ಹೆಣ್ಣು ಮಕ್ಕಳು ಇರುತ್ತೇವೆ ಎಂದರೆ ಸರಿ. ನನ್ನ ಐದು ಜನ ಹೆಣ್ಣು ಮಕ್ಕಳ ಮದುವೆಯನ್ನು ನಾನೇ ಮಾಡಿರುತ್ತೇನೆ, ಈ ಕೇಸು ದಾಖಲಾದ ನಂತರ ಕೂಲಿ ನಾಲಿ ಮಾಡಿ ಮದುವೆ ಮಾಡಿರುತ್ತೇನೆ. ನನಗೆ ಯಾರೂ ಅಣ್ಣ ತಮ್ಮಂದಿರು ನನ್ನ ಹೆಣ್ಣು ಮಕ್ಕಳ ಮದುವೆ ಮಾಡಲು ಸಹಾಯ ಮಾಡಿರುವುದಿಲ್ಲ ಎಂದರೆ ಸರಿ.

ಕುಟುಂಬದ ಎಲ್ಲಾ ಆಸ್ತಿಗಳ ಬಗ್ಗೆ ನಮ್ಮ ತಾಯಿಗೆ ಚೆನ್ನಾಗಿ ಗೊತ್ತಿರುತ್ತದೆ ಎಂದರೆ ಸರಿ. ಮಲ್ಲಿಕಾರ್ಜುನ ಮತ್ತು ಉದಯ ಕುಮಾರ ಮತ್ತು ನಾರಾಯಣ ಅವರು ತಮ್ಮ ತಮ್ಮ ಹೊಲಗಳಲ್ಲಿ ಬೋರ್ ವೆಲ್ ಗಳನ್ನು ಹಾಕಿರುತ್ತಾರೆ ಎಂದರೆ ಜಂಟಿ ಕುಟುಂಬದಿಂದ ಹಾಕಿರುತ್ತೇವೆ. ಅವರು ತಮ್ಮ ತಮ್ಮ ಹೊಲಗಳಲ್ಲಿ ಬೆಳೆದ ಬೆಳೆಗಳ ಮೊತ್ತವನ್ನು ಅವರೇ ಪಡೆಯುತ್ತಿದ್ದಾರೆ ಎಂದರೆ ಜಗಳ ಆದ ಕಾರಣ ಅವರೇ ಪಡೆಯುತ್ತಿದ್ದಾರೆ.

ಅವರವರ ಹೆಸರಿಗೆ ಕ್ರಯ ಪಡೆದ ಜಮೀನುಗಳ ಮೇಲೆ ಮತ್ತು ರುಕ್ಮಿಣಿ ಬಾಯಿಗೆ ಅವರ ತಂದೆ ತಾಯಿ ನೀಡಿದ ಜಮೀನಿನ ಮೇಲೆ ಜಂಟಿ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ಎಲ್ಲಾ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಅವರವರ ಸ್ವಯಾರ್ಜಿತ ಆಸ್ತಿಗಳನ್ನು ಕಬಳಿಸಬೇಕೆಂದು ನಾನು ನಮ್ಮ ಅಕ್ಕ ಸುಬ್ಬಮ್ಮ ಮತ್ತು ಚಂದ್ರಕಾಂತ, ಶಾಂತಪ್ಪ ಎಲ್ಲರೂ ಮಿಲಾಫೆಯಾಗಿ ವಾದಿಯಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬದಲ್ಲಿಈಗಾಗಲೇ ಎಲ್ಲರೂ ಬೇರೆ ಬೇರೆಯಾಗಿ ಅವರವರ ಪಾಲಿನ ಆಸ್ತಿಗಳನ್ನು ತಮ್ಮ ಹೆಸರಿಗೆ ದಾಖಲಿಸಿಕೊಂಡು ಉಳುಮೆ ಮಾಡುತ್ತಾ ಇದ್ದರೂ ಸಹ ಅವು ಇನ್ನೂ ಪಾಲು ವಿಭಾಗ ಆಗಿಲ್ಲ ಅಂತ ವಾದಿಯ ಕಡೆಯಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಪ್ಪ ಬೇರೆಯಾದ ಮೇಲೆ ತನ್ನ ಸ್ವಂತ ಆದಾಯದಿಂದ ತನ್ನ ಹೆಂಡತಿಯ ಹೆಸರಿನಲ್ಲಿ 30 ಲಕ್ಷ ರೂ. ಗಿಂತ ಹೆಚ್ಚು ಮೊತ್ತ ಕೊಟ್ಟು ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕಿಂತ ಮೊದಲು ತನ್ನ ಸ್ವಂತ ಆದಾಯದಿಂದ 2 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ವ್ಯವಹಾರ ಎಲ್ಲಾ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಮಾನ್ಯ MSS ವಕೀಲರಿಂದಃ**

ನಮ್ಮ ಎಲ್ಲರಕ್ಕಿಂತ ಸುಭಾಷ್ಚಂದ್ರ ಜಾಣ ಮತ್ತು ಬುದ್ದಿವಂತ ಎಂದರೆ ಸರಿ. ಆತ ವಿದ್ಯಾವಂತ ಎಂದರೆ ಸರಿ. ಆ ಕಾರಣ ಆತನನ್ನು ಉಳಿದ ಎಲ್ಲಾ ಸಹೋದರರಿಗಿಂತ ಹೆಚ್ಚು ಪ್ರೀತಿ ಮಾಡುತ್ತಿದ್ದರು ಎಂದರೆ ಸರಿ. ಆತ ತನ್ನ ತಂದೆಯ ಸಲಹೆಯಂತೆ ಕುಟುಂಬದ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿ. ನಮ್ಮ ತಂದೆಯವರು ಖರೀದಿ ಮಾಡಿದ ಜಮೀನುಗಳ ವ್ಯವಹಾರವನ್ನು ನೋಡಿಕೊಳ್ಳಲು ಆತನಿಗೆ ಮುಂದಾಳತ್ವ ವಹಿಸಿದ್ದರು ಎಂದರೆ ಸರಿ. ಅದರ ದುರಪಯೋಗ ಪಡೆದುಕೊಂಡು ಆತನು ನಮ್ಮ ಖರೀದಿಸಿದ ಆಸ್ತಿಗಳನ್ನು

ತನ್ನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ನೋಂದಣಿ ಮಾಡಿರುತ್ತಾನೆ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರವೂ ಸಹ ಆತನೇ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಮತ್ತು ಕುಟುಂಬದ ಆದಾಯದಿಂದ ಕ್ರಯ ಪಡೆದಿರುತ್ತಾನೆ ಎಂದರೆ ಸರಿ. ಉಳಿದ ಸಹೋದರರಿಗೆ ಮೋಸ ಮಾಡುವ ಉದ್ದೇಶದಿಂದ ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳನ್ನು ತನ್ನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ದಾಖಲು ಮಾಡಿರುತ್ತಾನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.